ಇ) ಸದಾಶಿವಗಡ–ಕುಂಬರವಾಡವರೆಗಿನ ರಸ್ತೆಯನ್ನು ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅನುಮತಿ ದೊರೆತ ನಂತರ 24 ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

725(222) ಶ್ರೀ ಗಂಗಾಧರ್ ನಾಗೇಶ್ ಭಟ್ : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರವಾರ ಸದಾಶಿವಗಡ ಬಳಿ ಕಾಳಿ ನದಿಗೆ ಸೇತುವೆಯನ್ನು ಯಾವಾಗ ನಿರ್ಮಿಸಲಾಯಿತು;

ಆ) ಅದಕ್ಕೆ ತಗಲಿದ ವೆಚ್ಚವೆಷ್ಟು;

ಇ) ಸೇತುವೆ ಬಳಸಲು ಶುಲ್ಕವನ್ನು ಎಂದಿನಿಂದ ವಸೂಲಿ ಮಾಡಲಾಗುತ್ತಿದೆ;

ಈ) ಇಲ್ಲಿಯವರೆಗೂ ವಸೂಲು ಮಾಡಿದ ವರ್ಷವಾರು ಶುಲ್ಕವೆಷ್ಟು;

ಉ) ಸರ್ಕಾರ ಸ್ಥಳೀಯರಿಗೆ ಶುಲ್ಕ ವಸೂಲಾತಿಯಲ್ಲಿ ವಿನಾಯಿತಿ ನೀಡುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಾಳಿ ನದಿಗೆ ಸೇತುವೆಯನ್ನು 1983 ರಲ್ಲಿ ನಿರ್ಮಿಸಲಾಯಿತು.

ಆ) ಸೇತುವೆ ನಿರ್ಮಾಣಕ್ಕಾಗಿ ರೂ. 396.00 ಲಕ್ಷಗಳಷ್ಟು ವೆಚ್ಚವಾಗಿರುತ್ತದೆ.

ಇ) ಸೇತುವೆ ಮೇಲೆ ಶುಲ್ಕವನ್ನು 1984 ರಿಂದ ವಸೂಲಿ ಮಾಡಲಾಗುತ್ತಿದೆ.

ಈ) ಇಲ್ಲಿಯವರೆಗೂ ರೂ. 538.00 ಲಕ್ಷಗಳ ಸುಂಕ ವಸೂಲಾತಿಯಾಗಿದ್ದು, ವರ್ಷಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.

ಉ) ಕೇಂದ್ರ ರಸ್ತೆ ನಿಧಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಇವರಿಂದ ಹೊರಡಿಸುವ ಅಧಿಸೂಚನೆಯಲ್ಲಿ ಸ್ಥಳೀಯರಿಗೆ ಶುಲ್ಕ ವಸೂಲಾತಿಯಲ್ಲಿ ವಿನಾಯಿತಿ ಇರುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ವರ್ಷ	ಸುಂಕ ವಸೂಲಾತಿ ಮೊತ್ತ (ಲಕ್ಷ ರೂ.ಗಳಲ್ಲಿ)
1	1984–86	13.20
2	1986–87	7.80
3	1987–88	7.80
4	1988–89	7.80
5	1989–90	10.50
6	1990–91	12.80
7	1991–92	17.50
8	1992–93	22.80
9	1993–94	23.60
10	1994–95	26.10
11	1995–96	37.50
12	1996–97	40.00
13	1997–98	36.70

14	1998–99	35.90
15	1999–2000	37.10
16	2000–01	39.00
17	2001–02	40.00
18	ಏಪ್ರಿಲ್ 2002	121.90
	ರಿಂದ ಡಿಸೆಂಬರ್	
	2004 ರವರೆಗೆ	
	ಒಟ್ಟು	538.00

727(229) ಶ್ರೀ ಗಂಗಾಧರ್ ನಾಗೇಶ್ ಭಟ್(ಕಾರವಾರ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೊಯಿಡಾದಲ್ಲಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ತನ್ವೀರ್ ಸೇಠ್(ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

728(539) ಶ್ರೀ ಗೋಪಾಲ ಪೂಜಾರಿ. ಕೆ (ಬೈಂದೂರು) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಮರವಂತೆ–ತ್ರಾಸಿ ಕಡಲ ತೀರದಲ್ಲಿ ಕೇಂದ್ರಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಹೊನಲು ಬೆಳಕು ಸಂಗೀತ ಕಾರಂಜಿ ನಿರ್ಮಿಸಲು ರೂ. 40,00 ಲಕ್ಷ ಮಂಜೂರು ಮಾಡಿದ್ದು, ಈ ಕಾಮಗಾರಿಯನ್ನು ನಿರ್ವಹಿಸಿದವರ ಮಾಹಿತಿ ನೀಡುವುದು;

ಆ) ಕಳೆದ ಮಳೆಗಾಲದಲ್ಲಿ ಸಮುದ್ರ ಕೊರೆತಕ್ಕೆ ಈಡಾಗಿ ಕುಸಿದು ಅಸ್ತಿತ್ವ ಕಳೆದುಕೊಂಡ ಹೊನಲು ಬೆಳಕು ವ್ಯವಸ್ಥೆಯನ್ನು ಸರಿಪಡಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು)

ಅ) ಮರವಂತೆ ಕಡಲುತೀರದಲ್ಲಿ ಸಂಗೀತ ಕಾರಂಜಿ, ಹೊನಲು ಬೆಳಕು ಮತ್ತು ಲ್ಯಾಂಡ್ ಸ್ಕೇಪಿಂಗ್ ನಿರ್ಮಿಸುವ ಕಾಮಗಾರಿಯನ್ನು ತೋಟಗಾರಿಕೆ ಇಲಾಖೆಯ ಅಂಗ ಸಂಸ್ಥೆ ಆದ ಮೆ; ನರ್ಸರಿಮೆನ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್, ಲಾಲ್‌ಬಾಗ್, ಬೆಂಗಳೂರು ಮೂಲಕ ಕಾರ್ಯಗತಗೊಳಿಸಲಾಗಿದೆ.

ಆ) ಕಾಮಗಾರಿ ನಿರ್ವಹಿಸಿದ ಸಂಸ್ಥೆ ಮೂಲಕ ಹೊನಲು ಬೆಳಕು ವ್ಯವಸ್ಥೆಯನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

729(541) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?